ಸಾವಿಗೆಂದು ಬಂದವರೆಲ್ಲಾ ಹೊರಟು ಹೋಗಿ, ಸ್ಪೆನ್ಸರ್ ಒಬ್ಬನೇ ಆ ವಿಶಾಲವಾದ ಹಜಾರದಲ್ಲಿ ಧ್ಯಾನಸ್ಥ ಸ್ಥಿತಿಯಲ್ಲಿ ಕುಳಿತುಕೊಂಡಿದ್ದ. ಮೂರುದಿನಗಳ ಗದ್ದಲದ ವಾತಾವರಣ ಶವದ ಪೆಟ್ಟಿಗೆ ಸಮಾಧಿಯೊಳಗೆ ಇಳಿಸುತ್ತಿದ್ದಂತೆ ದೂರವಾಗಿ ಅವನಿಗೆ ಈಗ ನಿರಾಳವೆನಿಸಿತ್ತು. ಅವನು ಎದ್ದು ತೆರೆದ ಕಿಟಕಿಯ ಕಡೆಗೆ ಹೆಜ್ಜೆ ಹಾಕಿದ. ಚಳಿಗಾಲದ ಆರಂಭದ ಆ ಸಂಜೆಯಲ್ಲಿ ಕಿಟಕಿಗೆ ಮುಖವಿಟ್ಟು ದೀರ್ಘ ಶ್ವಾಸವನ್ನು ಹೊರ ಬಿಟ್ಟ.

ಕಿಟಕಿಯನ್ನು ಮುಚ್ಚಿ, ಬೆಂಕಿಗೂಡನ್ನು ಹೊತ್ತಿಸಿ ಪಕ್ಕದಲ್ಲೇ ಇದ್ದ ಆರಾಮಕುರ್ಚಿಯಲ್ಲಿ ಬಿದ್ದುಕೊಂಡು ನರ್ತಿಸುತ್ತಿದ್ದ ಬೆಂಕಿಯ ಕೆನ್ನಾಲಿಗೆಗಳನ್ನೇ ನೋಡತೊಡಗಿದ. ಮೂವ್ವತ್ತೆಂಟು ವರ್ಷಗಳ ಅವನ ಜೀವಮಾನದಲ್ಲಿ ಸ್ಪೆನ್ಸರ್ ಮತ್ತೊಂದು ಪುಟವನ್ನು ತಿರುವಿದ್ದ. ಯಾರ ಅಂಕೆಯೂ ಇಲ್ಲದ ಸ್ವತಂತ್ರ ಜೀವನ ಅವನ ಎದುರಿಗಿತ್ತು. ತೀರಿಕೊಂಡ ಹೆಂಡತಿಯ ಆಸ್ತಿಗೆಲ್ಲಾ ಈಗ ಅವನೇ ಒಡೆಯ! ಹೆಂಡತಿಯ ಮುಂದೆ ಪ್ರತಿಯೊಂದಕ್ಕೂ ಹಲ್ಲುಗಿಂಜುವ ಪ್ರಮೇಯ ಇರಲಿಲ್ಲ!

ಹೆಜ್ಜೆಗಳ ಸಪ್ಪಳ ಕೇಳಿ ಅವನು ತಕ್ಷಣ ಹಿಂದಿನ ಮೂರು ದಿನಗಳ ಶೋಕತಪ್ತ ಮುಖಭಾವವನ್ನು ಹೊದ್ದುಕೊಂಡ. ಅದೇ ಮುಖವನ್ನು ಹೊದ್ದುಕೊಂಡ ಅಡುಗೆ ಹೆಂಗಸು ಹನ್ನಾ ಒಳ ಬಂದು, ಮೇಜಿನ ಮೇಲೆ ಕಟ್ಟು ಹಾಕಿದ ಭಾವಚಿತ್ರವೊಂದನ್ನು ಇಡುತ್ತಾ, "ನೆನಪಿಗಾಗಿ ಸರ್. ನಿಮಗೆ ಇಷ್ಟವಾಗಬಹುದು ಅಂತ ತಂದೆ" ಎಂದಳು ತಗ್ಗಿದ ಸ್ವರದಲ್ಲಿ.

ಅವಳಿಗೆ ಥ್ಯಾಂಕ್ಸ್ ಹೇಳುತ್ತಾ ಸ್ಪೆನ್ಸರ್ ಭಾವಚಿತ್ರವನ್ನು ಪಡೆದುಕೊಂಡ. ತನ್ನ ಕೈಗಳು ಸ್ಥಿರವಾಗಿದ್ದನ್ನು ಗಮನಿಸಿ ಅವನಿಗೆ ಸಮಧಾನವಾಯಿತು.

ಹನ್ನಾ ಇನ್ನೂ ಅಲ್ಲಿಯೇ ನಿಂತಿದ್ದಳು. ಆಗಾಗ ಕಣ್ಣೊರಸುತ್ತಿದ್ದಳು. "ನಿನಗೆ ಮತ್ತೇನಾದರೂ ಕೇಳುವುದಿದೆಯೇ ಹನ್ನಾ?" ಅವನ ಮಾತಿನಲ್ಲಿ, 'ನೀನಿನ್ನು ಹೋಗಬಹುದು' ಎನ್ನುವ ಸೂಚನೆ ಇತ್ತು.

"ಮೇಡಂ ತೀರಿಕೊಂಡಿಲ್ಲ, ಇಲ್ಲೇ ಎಲ್ಲೋ ಇದ್ದಾರೆಂದು ನನಗೆ ಅನಿಸುತ್ತೆ ಸರ್! ನನಗೆ ಏನೋ ಹೇಳಲು ಹಾತೊರೆಯುವಂತೆ ಭಾಸವಾಗುತ್ತೆ." ಅವನ ಪ್ರಶ್ನೆಯನ್ನು ಕಡೆಗಣಿಸುತ್ತಾ ಅವಳು ಹೇಳಿದಳು.

"ಕೆಲವು ದಿನಗಳು ಹಾಗೆ ಅನಿಸುವುದು ಸಹಜ ಹನ್ನಾ. ಮಾನಸಿಕ ಒತ್ತಡ. ನೀನು ಕೆಲವು ದಿನಗಳು ವಿಶ್ರಾಂತಿ ಪಡೆಯುವುದು ಲೇಸು."

"ನೀವೂ ಕಡಿಮೆ ಒತ್ತಡದಲ್ಲಿದ್ದೀರಾ ಸರ್. ಮೂರು ದಿನ ದಣಿವರಿಯದೆ ಹಗಲು ರಾತ್ರಿ ಮೇಡಮ್ ಸೇವೆ ಮಾಡಿದಿರಿ. ಖಂಡಿತ ನೀವೊಬ್ಬ ನರ್ಸಳನ್ನು ನೇಮಿಸಬಹುದಿತ್ತು."

"ಅದು ಮೇಡಮ್ ಅವರಿಗೆ ಸರಿ ಬರುತ್ತಿರಲಿಲ್ಲ ಹನ್ನಾ."

"ಅದು ಸರಿಯೇ. ಈ ನರ್ಸ್‌ಗಳಿಗೋ ಎಲ್ಲದರಲ್ಲೂ ಮೂಗು ತೂರಿಸುವ ಅಭ್ಯಾಸ ಬೇರೆ. ಡಾಕ್ಟರಿಗಿಂತ ತಾವೇ ಬುದ್ಧಿವಂತರೆಂದುಕೊಂಡಿರುತ್ತಾರೆ."

ಸ್ಪೆನ್ಸರ್ ಕತ್ತೆತ್ತಿ ಅಡುಗೆಯವಳ ಕಡೆಗೆ ನೋಡಿದ. ಅವಳ ಮುಖ ನಿರ್ಭಾವುಕವಾಗಿತ್ತು. ಹಾಸ್ಯ, ವ್ಯಂಗ್ಯ ಏನೂ ಕಾಣುತ್ತಿರಲಿಲ್ಲ. "ಮೇಡಮ್ ಅವರನ್ನು ನೋಡುತ್ತಿದ್ದ ಡಾಕ್ಟರರಿಗಿಂತ ಒಳ್ಳೆಯ ಡಾಕ್ಟರ್ ಬೇರೊಬ್ಬನಿರಲು ಸಾಧ್ಯವಿಲ್ಲ. ಅವಳಿದ್ದ ಪರಿಸ್ಥಿಯಲ್ಲಿ ಯಾರೂ, ಏನೂ ಮಾಡಲು ಸಾಧ್ಯವಿರಲಿಲ್ಲ." ಬೆಂಕಿಗೂಡನ್ನು ದಿಟ್ಟಿಸುತ್ತಾ ಸ್ಪೆನ್ಸರ್ ಹೇಳಿದ.

"ಸರ್, ನೀವು ಮಾಡಿದಷ್ಟು ಬೇರ್ಯಾವ ಗಂಡಸೂ ಮಾಡುತ್ತಿರಲಿಲ್ಲ ಬಿಡಿ..."

"ಸಾಕು ಹನ್ನಾ, ಸಾಕು!" ಅವನು ತೀಕ್ಷ್ಣವಾಗಿ ಹೇಳಿದ.

"... ಅದೂ ಬೆಣ್ಣೆಯಿಂದ ಕೂದಲು ತೆಗೆಯುವಷ್ಟು ಸಲೀಸಾಗಿ!" ಅದೇ ನಿರ್ಭಾವುಕತೆ.